**ಪ್ರಸ್ತುತ ಸಮಾಜಮನವನ್ನು ಒಗ್ಗೂಡಿಸುವಂತಹ ಗಣೇಶೋತ್ಸವಗಳು ಅತ್ಯಗತ್ಯವಾಗಿವೆ !**



# ಶ್ರೀ ಗಣೇಶನ ಸಂದರ್ಭದಲ್ಲಿ ಸಾಧಕರಿಗೆ ಬಂದ ಅನುಭೂತಿಗಳು

### ಸೇವೆಯು ಅಪೂರ್ಣವಾಗಬಾರದು ಎಂದು ಗಣರಾಯನೇ ಕಾಳಜಿ ವಹಿಸುವುದು

ಗಣಪತಿಯನ್ನು ಕೂಡಿಸಿ ಒಂದೂವರೆ ದಿನಗಳು ಕಳೆದಿದ್ದವು. ಮಧ್ಯಾಹ್ನ 5 ಗಂಟೆಗೆ ನಾವು ಗಣಪತಿಯ ವಿಸರ್ಜನೆಗಾಗಿ ರಿಕ್ಷಾದಲ್ಲಿ ಸಮುದ್ರಕ್ಕೆ ಹೊರಟೆವು. ರಿಕ್ಷಾದಲ್ಲಿ ಕುಳಿತುಕೊಂಡಾಗ ಅದು ಚಾಲು ಆಗಲೇ ಇಲ್ಲ. ಚಾಲಕನು ಎಲ್ಲ ರೀತಿಯಲ್ಲಿ ಪ್ರಯತ್ನಿಸಿದರೂ ಏನೂ ಮಾಡಲು ಆಗಲಿಲ್ಲ. ಇತರ ಯಾವುದೇ ರಿಕ್ಷಾದವರು ಬರಲು ಸಿದ್ಧರಿರಲಿಲ್ಲ. ಹಾಗಾಗಿ ಅದೇ ಚಾಲಕನು ತನ್ನ ಪರಿಚಯದವರಿಂದ ಒಂದು ರಿಕ್ಷಾ ತಂದನು. ಆಗ ನನ್ನ ಅಕ್ಕನವರು ನೆಂಟರಿಗೆ 'ಗಣರಾಯನ ಆಹಾರಸಾಮಾಗ್ರಿಗಳ ಬುತ್ತಿಯನ್ನು ಇಟ್ಟುಕೊಂಡಿದ್ದೀರೇನು' ಎಂದು ವಿಚಾರಿಸಿದರು. ಆಹಾರಸಾಮಾಗ್ರಿ ಎಂದರೆ ಗಣರಾಯನು ಹೊರಡುವಾಗ ಮೊಸರು-ಅವಲಕ್ಕಿಯನ್ನು ಬೆರೆಸಿಕೊಡುವಂತಹ ಆಹಾರದ ಬುತ್ತಿ. ಅದನ್ನು ನಾವು ಮನೆಯಲ್ಲಿಯೇ ಮರೆತಿದ್ದೆವು. ಅದನ್ನು ತಂದೊಡನೆ ರಿಕ್ಷಾ ಚಾಲು ಆಯಿತು. ನಮ್ಮ ಸೇವೆಯು ಅಪೂರ್ಣವಾಗಬಾರದು ಎಂದು ಗಣರಾಯನೇ ಕಾಳಜಿಯನ್ನು ವಹಿಸಿದನು ಎಂದು ನಮಗೆ ಅರಿವಾಯಿತು ಮತ್ತು ನಾನು ಕೃತಜ್ಞತೆ ವ್ಯಕ್ತಪಡಿಸಿದೆನು. - ಸೌ. ಗೌರಿ ಆಫಳೆ, ಸನಾತನ ಆಶ್ರಮ, ದೇವದ.

### ಶ್ರೀ ಗಣೇಶನ ಮೂರ್ತಿಯಿಂದ ಹಳದಿ ಕಿರಣಗಳು ಪ್ರಕ್ಷೇಪಿತವಾಗಿ ಅವು ನಮಗೆಲ್ಲರಿಗೆ ಸಿಗುವುದು

ನಾವು ನ್ಯೂಜರ್ಸಿಯಿಂದ ನಮ್ಮ ಮನೆಗೆ ಸನಾತನ ನಿರ್ಮಿತ ಗಣೇಶಮೂರ್ತಿಯನ್ನು ವಾಹನದಲ್ಲಿ ಕೊಂಡೊಯ್ಯುತ್ತಿದ್ದೆವು. ನನ್ನ ಕೈಯಲ್ಲಿ ಗಣೇಶಮೂರ್ತಿ ಇತ್ತು. ಆಗ ನನ್ನಿಂದ ಸತತವಾಗಿ ಪ್ರಾರ್ಥನೆ ಆಗುತ್ತಿತ್ತು. ಆ ಸಮಯದಲ್ಲಿ ಗಣೇಶಮೂರ್ತಿಯ ಮಧ್ಯಭಾಗದಲ್ಲಿರುವ ಒಂದು ಸ್ಥಾನದಿಂದ ಹಳದಿ ಕಿರಣಗಳು ಹೊರಬಂದು ನನ್ನ ಶರೀರದ ವಿವಿಧ ಭಾಗಗಳಿಗೆ ಪ್ರವೇಶಿಸುತ್ತಿವೆ ಮತ್ತು ಉಳಿದ ಕಿರಣಗಳು ವಾಹನದಲ್ಲಿ ಕುಳಿತಿರುವ ಇತರರೆಡೆಗೆ ಹೋಗುತ್ತಿವೆ ಎಂದರಿವಾಯಿತು. ಸ್ವಲ್ಪ ಸಮಯದ ನಂತರ ಮೂರ್ತಿಯ ಬೆನ್ನಿನಿಂದ ಬಿಳಿವರ್ತುಲಗಳು ಪ್ರಕ್ಷೇಪಿಸುತ್ತಿರುವುದು ಕಾಣಿಸಿತು. - ಸೌ. ಸುಹಾಸಿನಿ ಕಾಳೆ, ಅಮೇರಿಕಾ (ಮಾರ್ಚ್ 2008)

# ಗಣಪತಿಯ ಉಪಾಸನೆಯಲ್ಲಿ ಉಪಯೋಗಿಸಲ್ಪಡುವ ವಸ್ತುಗಳು

### ದೂರ್ವೆ (ಗರಿಕೆ)

ಗಣೇಶನ ಪೂಜೆಯಲ್ಲಿ ಗರಿಕೆಗೆ ವಿಶೇಷ ಮಹತ್ವವಿದೆ. ಇದನ್ನು ದೂರ್ವೆ ಎಂದು ಕರೆಯುತ್ತಾರೆ. ಈ ಶಬ್ದವು ದೂಃ + ಅವಮ್ ಹೀಗೆ ಉತ್ಪನ್ನವಾಗಿದೆ. 'ದೂಃ' ಅಂದರೆ ದೂರ ಇದ್ದದ್ದು ಮತ್ತು 'ಅವಮ್' ಅಂದರೆ ಯಾವುದು ಹತ್ತಿರ ತರುತ್ತದೆಯೋ ಅದು. ದೂರದಲ್ಲಿರುವ ಗಣೇಶ ಪವಿತ್ರಕಗಳನ್ನು ಯಾವುದು ಹತ್ತಿರ ತರುತ್ತದೆಯೋ ಅದುವೇ ದೂರ್ವೆ. ಗಣಪತಿಗೆ ಅರ್ಪಿಸಬೇಕಾದ ಗರಿಕೆಯು (ದೂರ್ವೆ) ಎಳೆಯದಾಗಿರಬೇಕು. ಅದನ್ನು 'ಬಾಲತೃಣಮ್' ಎನ್ನುತ್ತಾರೆ. ಒಣಗಿದಾಗ ಅದನ್ನು ಹುಲ್ಲೆಂದು ಪರಿಗಣಿಸಲಾಗುತ್ತದೆ. ದೂರ್ವೆಗಳಿಗೆ 3, 5, 7 ಹೀಗೆ ಬೆಸಸಂಖ್ಯೆಯ ಎಸಳುಗಳಿರಬೇಕು.

### ಕೆಂಪು ವಸ್ತುಗಳು

ಗಣಪತಿಯ ಬಣ್ಣವು ಕೆಂಪು. ಅವನ ಪೂಜೆಯಲ್ಲಿ ಕೆಂಪು ವಸ್ತ್ರ, ಕೆಂಪು ಹೂವು ಮತ್ತು ರಕ್ತಚಂದನವನ್ನು ಬಳಸುತ್ತಾರೆ. ಅವುಗಳ ಕೆಂಪು ಬಣ್ಣದಿಂದ ವಾತಾವರಣದಲ್ಲಿರುವ ಗಣಪತಿ ಪವಿತ್ರಕಗಳು ಮೂರ್ತಿಯ ಕಡೆಗೆ ಹೆಚ್ಚು ಪ್ರಮಾಣದಲ್ಲಿ ಆಕರ್ಷಿತವಾಗಿ ಮೂರ್ತಿಯನ್ನು ಜಾಗೃತಗೊಳಿಸಲು ಸಹಾಯವಾಗುತ್ತದೆ.

# ಚಂದ್ರ, ಮನಸ್ಸು ಮತ್ತು ಗಣೇಶ ಚತುರ್ಥಿ ಇವುಗಳ ಸಂಬಂಧ

1. ಸೌರಮಂಡಲದಲ್ಲಿನ ಎಲ್ಲ ಗ್ರಹಗಳಲ್ಲಿ ಚಂದ್ರಗ್ರಹವು ಅತ್ಯಂತ ಚಂಚಲವಾಗಿದೆ. ಆದುದರಿಂದ ಚಂಚಲ ಸ್ವಭಾವವಿರುವವರ ಮನಸ್ಸಿನ ಮೇಲೆ ಚಂದ್ರನ ಸ್ಪಂದನಗಳು ಹೆಚ್ಚು ಕಾರ್ಯ ಮಾಡುತ್ತವೆ.

2. ಪೃಥ್ವಿಯಿಂದ ಚಂದ್ರಗ್ರಹದ ದರ್ಶನವನ್ನು ನಾವು ಸಹಜವಾಗಿ ಪಡೆದುಕೊಳ್ಳಬಹುದು ಮತ್ತು ಅದನ್ನು ನಾವು ಮನಸ್ಸಿನಲ್ಲಿ ಅತ್ಯಂತ ಸಹಜವಾಗಿ ಯಾವಾಗ ಬೇಕಾದರೂ ನೋಡಬಹುದು.

3. ಪರಿಣಾಮ : ಗಣೇಶ ಚತುರ್ಥಿಯ ದಿನ ಬ್ರಹ್ಮಾಂಡದಲ್ಲಿ ನಿರ್ಮಾಣವಾಗುವ ರಜೋಗುಣದ ಸ್ಪಂದನಗಳು ಚಂದ್ರನ ಕಡೆಗೆ ಹೆಚ್ಚಿನ ಪ್ರಮಾಣದಲ್ಲಿ ಆಕರ್ಷಿತವಾಗಿ ಚಂಚಲ ಮನಸ್ಸಿರುವ ಮನುಷ್ಯರ ಕಡೆಗೆ ಆಕರ್ಷಿಸಲ್ಪಡುತ್ತವೆ.

ಗಣೇಶ ಚತುರ್ಥಿಯ ವೈಶಿಷ್ಟ್ಯಗಳು : ಈ ದಿನ ರಜೋಗುಣದಿಂದಾಗಿ ಚಂದ್ರನ ಸುತ್ತಲಿರುವ ಪ್ರಭಾವಲಯವು ಬಹಳ ತೇಜಸ್ವಿಯಾಗಿ ಕಾಣಿಸುತ್ತದೆ ಮತ್ತು ಅದು ಚಂಚಲ ಮನಸ್ಸನ್ನು ಸಹಜವಾಗಿ ಆಕರ್ಷಿಸಿಕೊಳ್ಳುತ್ತದೆ. ಈ ದಿನ ಚಂದ್ರದರ್ಶನವನ್ನು ಪಡೆದುಕೊಂಡರೆ, ಚಂದ್ರನು ತನ್ನ ಪ್ರಚಂಡ ರಜೋಗುಣದೊಂದಿಗೆ ಮನಸ್ಸಿನಲ್ಲಿ ಬೇರೂರುತ್ತಾನೆ. ಮನಸ್ಸಿನ ಮೇಲೆ ಮೂಡುವ ಅವನ ಚಿತ್ರವೂ ಅಷ್ಟೇ ಚಂಚಲವಾಗಿರುತ್ತದೆ. ಆದುದರಿಂದ ಅದು ಯಾವ ಕಾರಣಗಳು ಇಲ್ಲದಿರುವಾಗಲೂ ಮತ್ತು ಯಾವುದೇ ಸಮಯದಲ್ಲಿ ಮನಸ್ಸಿನ ಮೇಲೆ ಮೂಡುತ್ತದೆ. ಚಂದ್ರನನ್ನು ನೋಡಿದ ಸಮಯದಲ್ಲಿನ ದೃಶ್ಯವನ್ನು ನೆನಪಿಸಿಕೊಂಡರೂ ಮನಸ್ಸು ಚಂಚಲವಾಗುತ್ತದೆ.

### ಗಣೇಶ ಚತುರ್ಥಿಯ ದಿನ ಚಂದ್ರನ ದರ್ಶನವನ್ನು ಪಡೆದುಕೊಳ್ಳದಿರುವುದು

ಮನಸ್ಸಿನ ಚಂಚಲತೆಯು ಸುಮಾರು ಒಂದು ವರ್ಷದವರೆಗೆ ಉಳಿಯುತ್ತದೆ. ಮನಸ್ಸಿನ ಚಂಚಲತೆಯ ಪ್ರಚಂಡ ಪ್ರಭಾವದಿಂದಾಗಿ ಯಾವುದಾದರೊಂದು ಘಟನೆಯು ಘಟಿಸುವ ಮೊದಲೇ ಅದು ಘಟಿಸಿ ಹೋಗಿದೆ ಎಂಬ ತಪ್ಪುತಿಳುವಳಿಕೆ ಅಥವಾ ಗಾಳಿ ಸುದ್ದಿ ಹರಡುವ ಸಾಧ್ಯತೆ ಇರುತ್ತದೆ. ಇದನ್ನೇ ಯಾವುದಾದರೊಂದು ಅಡಚಣೆಯನ್ನು ಮೈಮೇಲೆ ಎಳೆದುಕೊಳ್ಳುವುದು ಎಂದು ಹೇಳುತ್ತಾರೆ. ಈ ಕಾರಣಕ್ಕಾಗಿ ಗಣೇಶ ಚತುರ್ಥಿಯ ದಿನ ಚಂದ್ರನನ್ನು ನೋಡುವುದು ಅಶುಭವೆಂದು ತಿಳಿದುಕೊಳ್ಳುತ್ತಾರೆ.

### ಜ್ಯೋತಿಷ್ಯ ಮತ್ತು ಚಂದ್ರದರ್ಶನ

ಗಣೇಶ ಚತುರ್ಥಿಯ ದಿನದಂದು ಯಾವ ವ್ಯಕ್ತಿಯ ರಾಶಿಯಲ್ಲಿ ಯಾವುದೇ ಸ್ಥಾನದಲ್ಲಿ ಚಂದ್ರನಿದ್ದರೆ ಅವನು ಚಂದ್ರದರ್ಶನವನ್ನು ಮಾಡಲೇಬಾರದು. ಇಂತಹ ವ್ಯಕ್ತಿಯು ನೀರಿನಲ್ಲಿ ಕಾಣಿಸುವ ಚಂದ್ರನ ಪ್ರತಿಬಿಂಬವನ್ನು ಸಹ ನೋಡಬಾರದು. ಏಕೆಂದರೆ ನೀರಿನಿಂದ ನೆನೆದಿರುವ ಮಣ್ಣಿನಲ್ಲಿಯೂ ಪ್ರಜನನ ಶಕ್ತಿಯು ಹೆಚ್ಚಾಗಿರುವುದರಿಂದ ಅಲ್ಲಿಯೂ ಪ್ರಚಂಡ ಪ್ರಮಾಣದಲ್ಲಿ ರಜೋಗುಣವು ನಿರ್ಮಾಣವಾಗಿರುತ್ತದೆ. - ಬ್ರಹ್ಮತತ್ತ್ವ (ಓರ್ವ ಸಾಧಕಿಯ ಮಾಧ್ಯಮದಿಂದ, 5.9.2005, ಬೆಳಗ್ಗೆ 10.32.)

### (1 ನೆಯ ಪುಟದಿಂದ) ಶ್ರೀ ಗಣೇಶ ಚತುರ್ಥಿ

ಮೂರ್ತಿಯನ್ನು ಇಟ್ಟು ಉತ್ಸವ ಮಾಡತೊಡಗಿದರು. ಕೆಲವರು ಗಣಪತಿಯನ್ನು ಗೌರಿಯ ಜೊತೆಗೆ ವಿಸರ್ಜನೆ ಮಾಡುತ್ತಾರೆ. ಯಾರಾದರೊಬ್ಬರ ಕುಲದಲ್ಲಿ ಗಣಪತಿಯನ್ನು ಐದು ದಿನ ಇಡುವ ಪದ್ಧತಿ ಇದ್ದು ಅದನ್ನು ಒಂದೂವರೆ ಅಥವಾ ಏಳು ದಿನ ಇಡಬೇಕು ಎಂದಾದರೆ ಅವರು ಹಾಗೆ ಮಾಡಬಹುದು. ಇದಕ್ಕೆ ಯಾವುದೇ ಅಧಿಕಾರಯುತ ವ್ಯಕ್ತಿಯನ್ನು ಕೇಳಬೇಕಾಗಿಲ್ಲ.

Ranganath C. Kini
CROWN Rubber Stamp Co.
Rubber Stamps, Polymer Stamps, Self Inking Stamps & Sun Stamps
Laxmi Nivas, Pragathi Compound, Balmatta Road, Mangalore - 575 001 Ph. : (0824) 2424603
Cell : 98441 24603 Email : rubbercrown@yahoo.co.in

ಇದ್ದುದನ್ನು ಮರೆತರೆ, ಅಂದರೆ ದೇಹಬುದ್ಧಿಯನ್ನು ಮರೆತರೆ ಇಲ್ಲದಿರುವುದು, ಎಂದರೆ ಆತ್ಮತತ್ತ್ವದ ಶೋಧವು ಪ್ರಾರಂಭವಾಗುತ್ತದೆ.

**- ಪ.ಪೂ. ಭಕ್ತರಾಜ ಮಹಾರಾಜರು, ಸನಾತನ ಸಂಸ್ಥೆಯ ಪ್ರೇರಣಾಸ್ಥಾನ**

ಹಾರ್ದಿಕ ಶುಭಾಶಯಗಳೊಂದಿಗೆ
ಕು. ರೇಖಾ ಪಾಟೀಲ
ಶಿಕ್ಷಕರು, ಹಿರೇಆಸಂಗಿ.

ಕಾಮದಿಂದ, ಭಯದಿಂದ, ಲೋಭದಿಂದ ಅಥವಾ ಜೀವದ ಆಸೆಯಿಂದ ಧರ್ಮವನ್ನು ಬಿಡಬಾರದು; ಏಕೆಂದರೆ ಧರ್ಮವು ನಿತ್ಯವಾಗಿದೆ ಮತ್ತು ಸುಖದುಃಖಗಳು ಕ್ಷಣಿಕವಾಗಿವೆ. ಜೀವವು ನಿತ್ಯವಾಗಿದೆ ಮತ್ತು ಶರೀರವು ಅನಿತ್ಯವಾಗಿದೆ.

With Best Compliments From
Sri. Madeva Hosamat
Mudhol.



Hotel Sri Ram
Mangal Pet, Katipalla, Suratkal. Ph. : 2270622

THE PROFESSIONAL COURIERS
Muktha Complex, Opp. Udupi Route Bus Stand, Karkala - 574 104
Ph. : (08258) 231019

Suvarna Motors
MJF Ln. Chandrahas Suvarna



Pervaje, Karkala.
Mob. : 98450 34691

### ಧರ್ಮರಕ್ಷಣೆಗಾಗಿ ಚಡಪಡಿಸುವವರು ಮುಕ್ತರಾಗುತ್ತಾರೆ !

ಶರೀರದಲ್ಲಿ ಸಾಮರ್ಥ್ಯವಿಲ್ಲದಿರುವಾಗಲೂ ತಮಗೆ ಆದಷ್ಟು ಧರ್ಮ ಶಾಸ್ತ್ರಗಳ ರಕ್ಷಣೆಗಾಗಿ ಚಡಪಡಿಸುವರು ಅದರ ಪುಣ್ಯದ ಪ್ರಭಾವದಿಂದ ಎಲ್ಲ ಪಾಪಗಳಿಂದ ಮುಕ್ತರಾಗಿ ಮುಕ್ತಿಯ ಅಧಿಕಾರಿಗಳಾಗುತ್ತಾರೆ.

With Best Compliments From
Sri. M.K. Salian
A/12 Shanthinikethana Colony, Bagalkot Road, Bijapur.
Ph. : (08352) 221919

### ದಾನದ ಮಹತ್ವ

ದಾನ ಮಾಡುವುದು ನಮ್ಮ ಸಂಸ್ಕೃತಿಯಾಗಿದೆ. ದಾನವನ್ನು ನಾವು ಯಾವಾಗಲೂ ಸತ್ಪಾತ್ರರಿಗೆ ಮಾಡಬೇಕು. ಈ ಜಗತ್ತಿನಲ್ಲಿ ಸಂತರಿಗಿಂತ ಸತ್ಪಾತ್ರರು ಬೇರೆ ಯಾರೂ ಇಲ್ಲ. ನಮ್ಮ ಜೀವನದಲ್ಲಿ ಬರುವ ಅಡಚಣೆಗಳು ಉದಾ. ಉದ್ಯೋಗದಲ್ಲಿ ನಷ್ಟ, ಕೈಯಲ್ಲಿ ಹಣ ಉಳಿಯದಿರುವುದು ಇತ್ಯಾದಿಗಳು ಸಂತರಿಗೆ ನೀಡಿದ ದಾನದಿಂದ ದೂರವಾಗುತ್ತವೆ ಮತ್ತು ಗುರುಕೃಪೆಯು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತದೆ.

With Best Compliments From
Srishaila Anil Poojary
Kasgeri, Bijapur.

### ವಿಶ್ವಾಸ ಮತ್ತು ವಿಕಲ್ಪ

ಈಶ್ವರನ ಮೇಲೆ ದೃಢವಾದ ವಿಶ್ವಾಸವಿರಬೇಕು. ಅವನು ನನಗೆ ಖಂಡಿತವಾಗಿಯೂ ಕೊಡುವವನಿದ್ದಾನೆ ಎಂದು ಅನಿಸಬೇಕು. 'ಅವನು ನನಗೆ ಕೊಡುವನೇನು ? ಹೀಗಾಗಲು ಸಾಧ್ಯವೇನು ?', ಹೀಗೆ ಮನಸ್ಸಿನಲ್ಲಿ ವಿಕಲ್ಪಗಳು ಬಂದರೆ ಅಲ್ಲಿ ವಿಕಲ್ಪಗಳೇ ಕಾರ್ಯ ಮಾಡುತ್ತವೆ ! ನಿಮಗೆ ಈಶ್ವರನಿಂದ ಸಿಗುವುದರಲ್ಲಿ ಅಡಚಣೆಗಳು ನಿರ್ಮಾಣವಾಗುವವು.

With Best Compliments From
Sri. Sudhakar Poojary
Shanthinikethan Colony, Bijapur.

### ಪರಮೇಶ್ವರನ ಶಕ್ತಿ

ಕತ್ತಲೆಯು ಪ್ರಕಾಶವನ್ನು ತೋರಿಸುತ್ತದೆ, ಅಂದರೆ ಕತ್ತಲೆಯು ಪರಮೇಶ್ವರನ ಶಕ್ತಿಯಾಗಿದೆ.

ಭಾವಾರ್ಥ : ಕತ್ತಲೆ ಎಂದರೆ ಮಾಯೆ ಮತ್ತು ಪ್ರಕಾಶ ಎಂದರೆ ಬ್ರಹ್ಮ. ಕತ್ತಲೆ ಯಿಂದ ಪ್ರಕಾಶವು ಕಾಣಿಸುತ್ತದೆ, ಅದೇ ರೀತಿ ಮಾಯೆಯಿಂದ ಬ್ರಹ್ಮನ ಅರಿವಾಗುತ್ತದೆ. ಅಂದರೆ ಮಾಯೆಯಲ್ಲಿಯೂ ಪರಮೇಶ್ವರನ ಶಕ್ತಿ ಇದೆ.

With Best Compliments From
Sri. Kamalakar Naik
C/o Mohan Shanbhag, Bazar Road, Honnavar.
P.P. : (08387) 221829

Frontline Comput-



# 1291/5, 1st Floor, Radhakrishna Temple Road, Opp. Indian Bank, Karwar - 581 301.
Ph. : (08382) 329355, 228988, 223939
Mob. : 9343544599
email : frontlinecomputers@gmail.com